ಆದರೆ ಅದೇ ವ್ಯಕ್ತಿ ಗಟ್ಟಿಯಾಗಿ ನಿಂತು ವಿದೇಶಗಳಿಂದ ಬರಬಹುದಾದ ನಿಷೇಧಗಳನ್ನೂ ಲೆಕ್ಕಿಸದೇ ಕೈಗೊಂಡ ಮುಖ್ಯ ಕೆಲಸ ಶಾಂತಿಗೆ ಸಂಬಂಧಿಸಿದ್ದು ಆಗಿಯೇ ಇರಲಿಲ್ಲ. ಅದು ಪೋಖ್ರನ್‌ನಲ್ಲಿ ನಡೆಸಿದ ಪರಮಾಣು ಪರೀಕ್ಷೆ. ಇದು ಗುಟ್ಟಾಗಿ ಆಗಬೇಕಿತ್ತು. ಹೀಗಾಗಿ ಹೆಚ್ಚಿನ ಮತ್ತು ವ್ಯಾಪಕ ಸಲಹೆ ಮತ್ತು ಸಂಭಾಷಣೆಗಳು ಸಾಧ್ಯವಿದ್ದಿಲ್ಲ. ಈ ರೀತಿಯ ತೀರ್ಮಾನಗಳು ಹಠಾತ್ ನಿರ್ಧಾರಗಳಲ್ಲದಿದ್ದರೂ, ವಿಸ್ತೃತ ಮತ್ತು ವ್ಯಾಪಕ ಚರ್ಚೆಯ ನಂತರ ಕೈಗೊಳ್ಳುವ ತೀರ್ಮಾನಗಳಲ್ಲ. ವ್ಯಾಪಕವಾಗಿ ಮತ್ತು ದೀರ್ಘಕಾಲದವರೆಗೆ ಪ್ರಭಾವ ಬೀರುವ ತೀರ್ಮಾನಗಳನ್ನು, ಏಕಾಂತದಲ್ಲಿ ಕೆಲವೇ ನಂಬುಗಸ್ಥರ ನಡುವೆ ಕೂತು ಮಾಡಬೇಕಾಗಿರುತ್ತದೆ. ಚಂದ್ರಶೇಖರ್ ಪ್ರಧಾನ ಮಂತ್ರಿಗಳಾಗಿದ್ದ ಅಲ್ಪಾವಧಿಯಲ್ಲಿ ಈ ಪರೀಕ್ಷೆಯನ್ನು ನಡೆಸಬಹುದೆಂದು ಕೆಲವರು ಸೂಚಿಸಿದ್ದರು. ವ್ಯಾಪಕ ಹಾಗೂ ವಿಸ್ತೃತ ಪ್ರಭಾವ ಬೀರುವ ತೀರ್ಮಾನದ ಜವಾಬ್ದಾರಿಯನ್ನು ಅಲ್ಪದಿನಗಳೇ ನಿಲ್ಲಬಹುದೆನ್ನಬಹುದಾದ ದುರ್ಬಲ ಸರ್ಕಾರ ಮಾಡುಬಹುದು ಎನ್ನುವ ಸಲಹೆಯಿದ್ದರೂ, ಹಾಗಾಗಲಿಲ್ಲ. ಅದಕ್ಕೆ ವಾಜಪೇಯಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಕಾಯಬೇಕಾಯಿತು.

ಕಡೆಯದಾಗಿ ನೀರಜಾ ಅವರು ಮನಮೋಹನ ಸಿಂಗ್ ಅವರ ಹತ್ತು ವರ್ಷಗಳ ಕಾರ್ಯಕಾಲವನ್ನು ವಿಶ್ಲೇಷಿಸಲು ಉಪಯೋಗಿಸುವುದು – ಒಂದು ರೀತಿಯಲ್ಲಿ ವಾಜಪೇಯಿ ಬಿಟ್ಟುಹೋದ ಪರಂಪರೆಯನ್ನು. ವಾಜಪೇಯಿ ಪರಮಾಣು ಪರೀಕ್ಷೆ ಮಾಡಿದರೆ, ಮನಮೋಹನ ಸಿಂಗ್ ಪರಮಾಣುವಿನಿಂದ ಇಂಧನ ಉತ್ಪಾದನೆಗೆ ಬೇಕಾದ ಕಚ್ಚಾ ಮಾಲನ್ನು ಆಮದು ಮಾಡಿಕೊಳ್ಳಲು ಅಮೆರಿಕದೊಂದಿಗೆ ಕಷ್ಟದ ಒಪ್ಪಂದ ಮಾಡಿಕೊಳ್ಳುವ ಕಥೆಯನ್ನು ಹೇಳುತ್ತಾರೆ. ಎರಡೂ ದೇಶಗಳಲ್ಲಿ ಸಂಸತ್ತಿನ ಅನುಮತಿಯೊಂದಿಗೆ ಮುಂದುವರೆಯಬೇಕಿತ್ತು. ಭಾರತದಲ್ಲಿ ಮನಮೋಹನ ಸಿಂಗ್‌ಗೆ ಕಾಂಗ್ರೆಸ್ ಪಕ್ಷದಲ್ಲೇ ವ್ಯಾಪಕ ಸಮರ್ಥನೆಯಿರಲಿಲ್ಲ. ಅತ್ತ ಜಾರ್ಜ್ ಬುಷ್ ತಮ್ಮ ಕಾರ್ಯಕಾಲದಲ್ಲಿ ಈ ಒಪ್ಪಂದವನ್ನು ಸಂಪನ್ನಗೊಳಿಸದಿದ್ದರೆ ಮುಂದೆ ಇದು ಆಗುವ ಸಾಧ್ಯತೆಯಿಲ್ಲ ಎಂದು ನಂಬುತ್ತಾರೆ. ಇಲ್ಲಿ ಎಡಪಂಥೀಯರು ಇದನ್ನು ವಿರೋಧಿಸುತ್ತಾರೆ. ಅವರ ಬೆಂಬಲದ ಮೇಲೆ ನಿಂತಿರುವ ಸರ್ಕಾರ ಬೀಳಬಹುದಾದ ಅಪಾಯವನ್ನೂ ಮೀರಿ ಮನಮೋಹನ ಸಿಂಗ್ ತಮ್ಮಲ್ಲಿ ಹಿಂದೆಂದೂ ಕಾಣದ ರಾಜಕೀಯ ಮುತ್ಸದ್ದಿತನವನ್ನು ತೋರುತ್ತಾರೆ. ಐತಿಹಾಸಿಕವಾದ ಈ ಒಪ್ಪಂದ ಕಡೆಗೂ ಮನಮೋಹನ ಸಿಂಗ್ ಅವರ ಕಾರ್ಯಕಾಲದ ಮಹತ್ವದ ನಿರ್ಣಯವಾಗುತ್ತದೆ.

ಈ ಎಲ್ಲವೂ ನಮ್ಮ ದೇಶದ ಭವಿಷ್ಯವನ್ನು ಮೂಲಭೂತವಾಗಿ ಬದಲಾಯಿಸುವಂತಹ ನಿರ್ಧಾರಗಳು. ಎಲ್ಲವೂ ಸುಲಭವಲ್ಲದ ನಿರ್ಧಾರಗಳು. ಅನೇಕ ಬಾರಿ ಗಟ್ಟಿ ನಿರ್ಧಾರಗಳನ್ನು ಕೈಗೊಂಡರೂ ಅದನ್ನು ಜಾರಿ ಮಾಡುವುದು ಕಷ್ಟ. ಗಟ್ಟಿ ನಿರ್ಧಾರಗಳನ್ನು ಕೈಗೊಳ್ಳಲು ಬಹುಮತವಿರುವ ಗಟ್ಟಿ ಸರ್ಕಾರ ಬೇಕು ಎನ್ನುವ ಮಾತನ್ನು ಈ ಎಲ್ಲ ನಿರ್ಧಾರಗಳೂ ಧ್ವಂಸ ಮಾಡುತ್ತವೆ. ಇಲ್ಲಿರುವ ಯಾವುದೇ ನಿರ್ಧಾರದಿಂದಾಗಿ ಅಲ್ಪಮತದ ಅಥವಾ ಮೈತ್ರಿಯ ಸರ್ಕಾರಗಳಿದ್ದರೂ ಅವು ಬೀಳಲಿಲ್ಲ ಎನ್ನುವುದು ಮಹತ್ವದ ಮಾತು. ಇದಕ್ಕೆ ಅಪವಾದವಾಗಿ ಬಹುಮತದ ಸರ್ಕಾರವನ್ನು ಚಲಾಯಿಸುತ್ತಾ, ಹೆಚ್ಚಿನ ಸಲಹೆ ಸಮಾಲೋಚನೆಯಿಲ್ಲದೆಯೇ ಮೋದಿಯವರೂ ತಮ್ಮ ನೋಟುಬಂದಿಯಂತಹ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ. ಆದರೆ ನೀರಜಾ, ಮೋದಿಯವರ ಕಾರ್ಯಕಾಲವನ್ನು ವಿಶ್ಲೇಷಿಸುವುದಿಲ್ಲ. ಅದಕ್ಕೆ ಇನ್ನಷ್ಟು ಕಾಲ ಕಳೆಯಬೇಕು. ಆಗ ಯಾವುದೇ ಪೂರ್ವಗ್ರಹವಿಲ್ಲದೇ ಮೌಲ್ಯಮಾಪನ ಮಾಡಬಹುದೆಂದು ಅವರು ಹೇಳುತ್ತಾರೆ.

ಈ ಪುಸ್ತಕ ಒಂದು ಮಟ್ಟದಲ್ಲಿ ವಿವರಗಳಿಂದ ತುಂಬಿ ಅನೇಕ ಒಳನೋಟಗಳನ್ನು ಕೊಟ್ಟರೂ, ಮತ್ತೊಂದು ಸ್ತರದಲ್ಲಿ ತುಂಬಾ ನಿರಾಶಾದಾಯಕವಾಗಿ, ನಮ್ಮನ್ನು ಅಸಹಾಯಕರಾಗಿರುವಂತೆ ಚಿತ್ರಿಸುತ್ತದೆ. ನಾವು ಭಕ್ತಿಯಿಂದ ಹೋಗಿ ನಮ್ಮ ಕರ್ತವ್ಯವೆನ್ನುವಂತೆ ಚುನಾವಣೆಯಲ್ಲಿ ಮತ ಹಾಕಿ ಗೆಲ್ಲುವ ಅಭ್ಯರ್ಥಿಗಳು ತೀರ್ಮಾನಗಳನ್ನು– ಅದರಲ್ಲೂ ಮಹತ್ವದ ತೀರ್ಮಾನಗಳನ್ನು– ಕ್ಷಣಿಕ ಲಾಲಸೆಯಿಂದಾಗಿ ಮಾಡುತ್ತಾರೆನ್ನುವುದು ಹಾಸ್ಯದ ವಿಷಯವಲ್ಲ. ಹೀಗಿದ್ದಾಗ್ಯೂ ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆ ಒಟ್ಟಾರೆ ಚೆನ್ನಾಗಿಯೇ ನಡೆಯುತ್ತಿದೆ ಎನ್ನುವುದು ನಮ್ಮ ಅದೃಷ್ಟದ, ತೃಪ್ತಿಯ ವಿಷಯ ಮಾತ್ರ. ●